# ಕೃಷಿ ಇಲಾಖೆ ಯೋಜನೆಗಳು 2020-21

## ಮಣ್ಣು ಆರೋಗ್ಯ ಅಭಿಯಾನ

- ❖ ಪ್ರತಿಯೊಬ್ಬ ರೈತನೂ ತನ್ನ ಜಮೀನಿನ ಮಣ್ಣಿನ ಫಲವತ್ತೆಯನ್ನು ತಿಳಿದುಕೊಳ್ಳುವಂತೆ ಮಾಡುವುದು ಮತ್ತು ಮಣ್ಣು ಪರೀಕ್ಷೆ ಆಧಾರದ ಮೇಲೆ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಗೊಬ್ಬರಗಳ ಬಳಕೆ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ.
- ❖ ಮಣ್ಣು ಆರೋಗ್ಯ ನಿರ್ವಹಣೆ ಉತ್ತೇಜಿಸಲು, ಪ್ರತಿ 3 ವರ್ಷಗಳಿಗೊಮ್ಮೆ ಎಲ್ಲಾ ರೈತರಿಗೂ ಮಣ್ಣು ಆರೋಗ್ಯ ಚೀಟಿ ವಿತರಣೆ ಮಾಡುವುದು
- ❖ ಸಸ್ಯ ಪೋಷಕಾಂಶಗಳ ಸಮತೋಲನ ಮತ್ತು ವಿವೇಚನಾಯುಕ್ತ ಬಳಕೆ ಬಗ್ಗೆ ಪ್ರಚಾರ
- ❖ ಮಣ್ಣು ಪರೀಕ್ಷೆ ಆಧಾರಿತ ಮಣ್ಣು ಆರೋಗ್ಯ ಚೀಟಿಯ ಉಪಯುಕ್ತತೆಯ ಬಗ್ಗೆ ರೈತರಿಗೆ ಅರಿವು ಮೂಡಿಸಲು ಮತ್ತು ಪೋಷಕಾಂಶ ನಿರ್ವಹಣಾ ಪದ್ಧತಿಯನ್ನು ಪ್ರೋತ್ಸಾಯಿಸಲು ರೈತರಿಗೆ ತರಬೇತಿಗಳನ್ನು ಆಯೋಜಿಸುವುದು.
- ❖ GPS ಆಧಾರಿತ ಗ್ರಿಡ್ ಮಾದರಿಯಲ್ಲಿ ಮಳೆಯಾಶ್ರಿತ ಜಮೀನುಗಳಲ್ಲಿ ಪ್ರತಿ 10 ಹೆ. ಗೆ ಒಂದು ಮಣ್ಣು ಮಾದರಿಯನ್ನು ಸಂಗ್ರಹಿಸಲಾಗುವುದು.
- ❖ ಮಣ್ಣು ಪರೀಕ್ಷಾ ಕೇಂದ್ರಗಳಲ್ಲಿ ಮಾದರಿಗಳ ವಿಶ್ಲೇಷಣೆ ಮಾಡಿ, ಮಣ್ಣು ಆರೋಗ್ಯ ಚೀಟಿಗಳನ್ನು ವಿತರಿಸಲಾಗುವುದು.
- ❖ ಮಣ್ಣಿನ ವಿಶ್ಲೇಷಣೆ ಆಧಾರದ ಮೇಲೆ ಬೆಳೆಗಳಿಗೆ ಅನುಗುಣವಾಗಿ ರಸಗೊಬ್ಬರಗಳನ್ನು ಶಿಫಾರಸ್ಸು ಮಾಡಲಾಗುವುದು.

## ಬೇವು ಲೇಪಿತ ಯೂರಿಯಾ ರಸಗೊಬ್ಬರದ ಬಳಕೆ ಮತ್ತು ಮಹತ್ವ

- ❖ **ಸಾರಜನಕಯುಕ್ತ ಗೊಬ್ಬರಗಳಲ್ಲಿ ಯೂರಿಯಾ ರಸಗೊಬ್ಬರದಲ್ಲಿಯೇ ಹೆಚ್ಚಿನ ಸಾರಜನಕ (ಶೇ. 46ರಷ್ಟು) ಇದ್ದರೂ ಸಹ ಬೆಳೆಗಳಿಗೆ ಲಭ್ಯವಾಗುವುದು ಶೇ. 50 ರಷ್ಟು ಮಾತ್ರ.**
- ❖ **ಉಳಿದ ಸಾರಜನಕವು ನೀರಿನಲ್ಲಿ ನೈಟ್ರೇಟ್ ರೂಪವಾಗಿ ಪರಿವರ್ತಿತಗೊಂಡು ಗಾಳಿ/ನೀರಿನಲ್ಲಿ ಸೇರಿ ನಷ್ಟವಾಗುತ್ತದೆ.**
- ❖ **ಬೇವಿನೆಣ್ಣೆಯು ಸಾರಜನಕವು ನೈಟ್ರೇಟ್ ಆಗಿ ಪರಿವರ್ತನೆಗೊಳ್ಳುವುದನ್ನು ತಡೆಯುತ್ತದೆ.**
- ❖ **ಬೇವು ಲೇಪಿತ ಯೂರಿಯಾ ರಸಗೊಬ್ಬರವು ನಿಧಾನಗತಿಯಲ್ಲಿ ಸಾರಜನಕವನ್ನು ಬಿಡುಗಡೆ ಮಾಡುವುದರಿಂದ ಬೆಳೆಗಳಿಗೆ ಅವಶ್ಯವಿರುವ ಸಾರಜನಕವು ನಿರಂತರವಾಗಿ ದೊರೆಯುವಂತಾಗುತ್ತದೆ.**
- ❖ **ಬೆಳೆಗೆ ಸಿಗಬಹುದಾದ ಸಾರಜನಕದ ಪ್ರಮಾಣ ಶೇ. 5 ರಿಂದ 10% ರಷ್ಟು ಹೆಚ್ಚುವುದರಿಂದ ಯೂರಿಯಾ ರಸಗೊಬ್ಬರ ಬಳಕೆ ಪ್ರಮಾಣ ಕಡಿಮೆಯಾಗುತ್ತದೆ.**
- ❖ **ಬೇವಿನೆಣ್ಣೆಯಲ್ಲಿರುವ ಕ್ರಿಮಿನಾಶಕ ಗುಣದಿಂದ ಮಣ್ಣಿನಲ್ಲಿರುವ ಜಂತು ಹುಳುಗಳು, ಗೆದ್ದಲುಗಳು ಹಾಗೂ ಇತರೆ ಮಣ್ಣಿನ ಪೀಡೆಗಳನ್ನು ನಿಯಂತ್ರಿಸಬಹುದು.**
- ❖ **ಬೇವಿನೆಣ್ಣೆ ಲೇಪಿಸಿರುವುದರಿಂದ ಯೂರಿಯಾ ಕಣಗಳು ಪುಡಿಯಾಗುವುದನ್ನು ತಪ್ಪಿಸಬಹುದಾಗಿದೆ.**
- ❖ **ಬೇವು ಲೇಪಿತ ಯೂರಿಯಾ ರಸಗೊಬ್ಬರವನ್ನು ಬೆಳೆಗೆ ಅವಶ್ಯಕತೆಗನುಗುಣವಾಗಿ, ಮಣ್ಣು ಪರೀಕ್ಷೆ ಆಧಾರಿತ ಶಿಫಾರಸ್ಸಿನ ಮೇರೆಗೆ ಬಳಸಬೇಕು.**

## ಕೆ–ಕಿಸನ್ ಯೋಜನೆ ರೈತರ ನೋಂದಾವಣೆ

ಕೃಷಿ ವಿಸ್ತರಣಾ ವ್ಯವಸ್ಥೆಯನ್ನು ಬಲಪಡಿಸುವ ಹಾಗೂ ಆಧುನೀಕರಣಗೊಳಿಸುವಲ್ಲಿ ಕೃಷಿ ಇಲಾಖೆಯು ಮಾಹಿತಿ ಮತ್ತು ಸಂವಹನ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೈತ ಸಂಪರ್ಕ ಕೇಂದ್ರಗಳಿಂದ ಕೃಷಿ ಸಚಿವಾಲಯದವರೆಗೆ ಇಲಾಖೆಯು ನೀಡುತ್ತಿರುವ ಪ್ರಮುಖ ಸೇವೆಗಳನ್ನು,

- ❖ ಸಕಾಲದಲ್ಲಿ ರೈತ ಸಮುದಾಯಕ್ಕೆ ತಂತ್ರಜ್ಞಾನ ಮಾಹಿತಿ ಮತ್ತು ಸೇವೆಗಳನ್ನು ಒದಗಿಸುವುದು.
- ❖ ಕೃಷಿ ಇಲಾಖೆಯಿಂದ ರೈತರಿಗೆ ದೊರೆಯುವ ಸೂಕ್ಷ್ಮ ನೀರಾವರಿ ಸೌಲಭ್ಯ, ಕೃಷಿ ಯಾಂತ್ರೀಕರಣ, ಸಸ್ಯ ಸಂರಕ್ಷಣೆ, ಇತ್ಯಾದಿ ಯೋಜನೆಗಳ ತ್ವರಿತ ಅನುಷ್ಠಾನಕ್ಕಾಗಿ ಅರ್ಜಿ ಸಲ್ಲಿಸುವಿಕೆಯಿಂದ ಸಹಾಯಧನ ನೀಡುವವರೆಗೆ ಆನ್‌ಲೈನ್ ವ್ಯವಸ್ಥೆ.
- ❖ ಪ್ರತಿಯೊಬ್ಬ ರೈತರಿಗೂ ಒಂದು ಅಧಿಕೃತ ಗುರುತಿನ ಸಂಖ್ಯೆ ನೀಡುವುದು.
- ❖ ಕೆ–ಕಿಸಾನ್ ಯೋಜನೆಯಡಿ ರೈತರನ್ನು ನೊಂದಾಯಿಸಲು ನೇರವಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರಕ್ಕೆ ಈ ಕೆಳಗಿನ ದಾಖಲೆಗಳೊಂದಿಗೆ ಸಂಪರ್ಕಿಸುವುದು.
    - ಸಂಪೂರ್ಣ ಹಿಡುವಳಿಯ ಪಹಣಿಗಳು
    - ಪಾಸ್‌ಪೋರ್ಟ್ ಅಳತೆಯ ಛಾಯಾಚಿತ್ರ
    - ಆಧಾರ್ ಕಾರ್ಡ್/ರೇಷನ್ ಕಾರ್ಡ
    - ಮತದಾರರ ಗುರುತಿನ ಚೀಟಿ
    - ಇವುಗಳಲ್ಲಿ ಯಾವುದಾದರೂ ಒಂದು
    - ಬ್ಯಾಂಕ್ ಉಳಿತಾಯ ಖಾತೆಯ ಪುಸ್ತಕದ ಜೆರಾಕ್ಸ್

## ಜಿಲ್ಲಾ ಕೃಷಿ ತರಭೇತಿ ಕೇಂದ್ರ, ಕುಮಟಾ (ಉತ್ತರ ಕನ್ನಡ)

- ❖ ಜಿಲ್ಲೆಯ ರೈತರಿಗೆ/ರೈತ ಮಹಿಳೆಯರಿಗೆ ಕೃಷಿ ಹಾಗೂ ಕೃಷಿ ಸಂಬಂಧಿತ ವಿಷಯಗಳಬಗ್ಗೆ ತರಬೇತಿ ನೀಡುವುದು
- ❖ ಇಲಾಖೆಯ ಅಧಿಕಾರಿ/ಸಿಬ್ಬಂದಿಗಳಿಗೆ ತರಬೇತಿ
- ❖ ಜಿಲ್ಲೆಯ ರೈತ ಅನುವುಗಾರರಿಗೆ ತರಬೇತಿ
- ❖ ಸ್ತ್ರೀಶಕ್ತಿ/ರೈತ ಶಕ್ತಿ ಗುಂಪಿನ ಸದಸ್ಯರುಗಳಿಗೆ ವಿಷಯಾಧಾರಿತ ವಿಶೇಷ ತರಬೇತಿಗಳು

ಕೃಷಿ ಸಂಬಂಧಿಸಿದ ವಿಷಯಾಧಾರಿತ ತರಬೇತಿ ಪಡೆಯುಲು ಆಸಕ್ತಿಯುಳ್ಳ ರೈತರು ರೈತ ಸಂಪರ್ಕ ಕೇಂದ್ರ/ಸಹಾಯಕ ಕೃಷಿ ನಿರ್ದೇಶಕರ ಕಛೇರಿ/ಜಿಲ್ಲಾ ಕೃಷಿ ತರಬೇತಿ ಕೇಂದ್ರವನ್ನು ಸಂಪರ್ಕಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ : ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕುಮಟಾ

# ಕೃಷಿ ಯಂತ್ರಧಾರೆ-ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ (CHSC)

- ರೈತರಿಗೆ ಸಕಾಲದಲ್ಲಿ ಮತ್ತು ಕಡಿಮೆ ಬಾಡಿಗೆ ದರದಲ್ಲಿ ಕೃಷಿ ಯಂತ್ರೋಪಕರಣಗಳನ್ನು ಒದಗಿಸಲು ತಾಲ್ಲೂಕಿಗೆ ಒಂದು "ಕೃಷಿ ಯಂತ್ರೋಪಕರಣಗಳ ಬಾಡಿಗೆ ಆಧಾರಿತ ಸೇವಾ ಕೇಂದ್ರ" ಗಳನ್ನು ತೆರೆಯಲಾಗಿರುತ್ತದೆ.
- ಮುಂದಿನ ಹಂತದಲ್ಲಿ ಉಳಿದ ಹೋಬಳಿಗಳಲ್ಲಿ "ಕೃಷಿ ಯಂತ್ರಧಾರೆ" ಕೇಂದ್ರಗಳನ್ನು ತೆರೆಯಲು ಉದ್ದೇಶಿಸಲಾಗಿದೆ.

## ಕೃಷಿ ಯಂತ್ರಧಾರೆಯಲ್ಲಿರುವ ಯಂತ್ರೋಪಕರಣಗಳು ಮತ್ತು ಬಾಡಿಗೆ ದರ

| ಕ್ರ.ಸಂ. | ಜಿಲ್ಲಾ ಸಮಿತಿಯಲ್ಲಿ ಮಂಜೂರಾದ ಉಪಕರಣಗಳು | ಬಾಡಿಗೆ (ರೂ.ಗಳಲ್ಲಿ) |
|---|---|---|
| 1. | ಪವರ್ ಟಿಲ್ಲರ್ | 300/ಗಂಟೆಗೆ |
| 2. | ಕಳೆ ತೆಗೆಯುವ ಯಂತ್ರ | 200/ಗಂಟೆಗೆ |
| 3. | ಟ್ರಾಕ್ಟರ್35 ಹೆಚ್.ಪಿ.+ರೋಟೋವೇಟರ್ | 500/ಗಂಟೆಗೆ |
| 4. | ಟ್ರಾಕ್ಟರ್ 39 ಮತ್ತು 47 ಹೆಚ್.ಪಿ. | 500/ಗಂಟೆಗೆ |
| 5. | ಎಂ. ಬಿ ಪ್ಲೋ | 600/ಗಂಟೆಗೆ |
| 6. | ಕಲ್ಟಿವೇಟರ್ | 600/ಗಂಟೆಗೆ |
| 7. | ರೋಟೋವೇಟರ್ 5 ಪೂಟ್ | 700/ಗಂಟೆಗೆ |
| 8. | ರೋಟೋವೇಟರ್ 6 ಪೂಟ್ | 800/ಗಂಟೆಗೆ |
| 9. | ಭತ್ತ ಕಟಾವು ಯಂತ್ರ | 500/ಗಂಟೆಗೆ |
| 10. | ಭತ್ತ ತೂರುವ ಯಂತ್ರ | 360/ಗಂಟೆಗೆ |
| 11. | ಅಡಿಕೆ ಮರ ಹತ್ತುವ ಯಂತ್ರ | 80/ದಿನಕ್ಕೆ |
| 12. | ಭತ್ತದ ಒಕ್ಕಣೆಯಂತ್ರ | 500/ಗಂಟೆಗೆ |
| 13. | ಭತ್ತ ನಾಟಿಯಂತ್ರ | 450/ ಗಂಟೆಗೆ |
| 14. | ಪೋರ್ಟಬಲ್ ಸ್ಪ್ರೇಯರ್ | 200/ದಿನಕ್ಕೆ |
| 15. | ಕಂಬೈಂಡ್ ಹಾರವೆಸ್ಟರ್ | 1500/ ಗಂಟೆಗೆ |
| 16. | ತೆಂಗಿನ ಮರ ಹತ್ತುವ ಯಂತ್ರ | 80/ /ದಿನಕ್ಕೆ |
| 17. | ಭತ್ತ ಒಕ್ಕಣೆ ಯಂತ್ರ | 500/ಗಂಟೆಗೆ |
| 18. | ಮಲ್ಟಿಕ್ರಾಪ್ ಥ್ರೇಷರ್ | 500/ಗಂಟೆಗೆ |

**ಸೂಚನೆ : ಜಿಲ್ಲಾ ಮಟ್ಟದ ಸಮಿತಿಯ ಸಭೆಯಲ್ಲಿ ಕಾಲಕಾಲಕ್ಕೆ ಕೃಷಿ ಯಂತ್ರೋಪಕರಣಗಳ ಬಾಡಿಗೆ ದರಗಳು ಪರಿಷ್ಕೃತಗೊಳ್ಳುತ್ತವೆ.**

# ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ

| | | |
|---|---|---|
| 1 | ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ – "ಪ್ರತಿ ಹನಿ ನೀರಿಗೆ ಹೆಚ್ಚು ಬೆಳೆ" | ಸೂಕ್ಷ ನೀರಾವರಿ ಘಟಕಗಳವಿತರಣೆ (ಸಹಾಯ ಧನದೆಲ್ಲಿ ತುಂತುರು / ಹನಿ ನೀರಾವರಿ ಘಟಕಗಳ ವಿತರಣೆ) |
| 2 | ಪ್ರಧಾನ ಮಂತ್ರಿಗಳ ಕೃಷಿ ಸಿಂಚಯಿ ಯೋಜನೆ (ಕಒಏಖಐ) – ಆತ್ಮ | ನೀರಿನ ನಿರ್ವಹಣೆ, ಸಂರಕ್ಷಣೆ ಮತ್ತು ಸದ್ಬಳಕೆಯ ಬಗ್ಗೆ ತರಬೇತಿ, ಪ್ರಾತ್ಯಕ್ಷಿಕೆಗಳು, ಕ್ಷೇತ್ರ ಪಾಠಶಾಲೆ, ಪರಿಚಯ ಪ್ರವಾಸ |
| 3 | ಪ್ರಧಾನ ಮಂತ್ರಿ ಕೃಷಿ ಸಿಂಚಯಿ ಯೋಜನೆ– ಜಲಾನಯನ ಅಭಿವೃದ್ಧಿ – "ಪ್ರತಿ ಜಮೀನಿಗೂ ನೀರು" (ಹರ್ ಖೇತ್ ಕೊ ಪಾನಿ) | * ಪರ್ಯಾಯ ಸಮಪಾತಳಿ ಕಂದಕಗಳ ನಿರ್ಮಾಣ ಮಾಡುವುದು<br>* ಸಮಪಾತಳಿ, ವಾರಡಿ, ಕಂದಕ ಬದುಗಳ ನಿರ್ಮಾಣ ಮಾಡುವುದು.<br>* ಇಳಿಜಾರು ಪ್ರದೇಶದಲ್ಲಿ ಜಗತಿಕಟ್ಟೆ/ಮಟ್ಟ ಹಾಳೆಗಳ ನಿರ್ಮಾಣ ಮಾಡುವುದು.<br>* ಮಣ್ಣಿನ ತಡೆಗಳು, ಬ್ರಷ್‌ವುಡ್‌ನ ತಡೆಗಳು, ಸಡಿಲ ಕಲ್ಲು ತಡೆಗಳ – ಗೇಬಿಯಾನ್ ರಚನೆಗಳ ನಿರ್ಮಾಣ ಮಾಡುವುದು.<br>* ಮಳೆ ನೀರು ಸಂಗ್ರಹಿಸಲು ಕೃಷಿ ಹೊಂಡಗಳು, ನಾಲಾ ಬದುಗಳು, ತಡೆ ಅಣೆ ಹಾಗೂ ಕಿಂಡಿ ಅಣೆಗಳು, ಜಿನುಗು ಕೆರೆಗಳು ಮುಂತಾದ ನೀರು ಸಂಗ್ರಹಣಾ ವಿನ್ಯಾಸಗಳ ಅಭಿವೃದ್ಧಿ. ಬಾವಿಗಳು, ಕೊಳವೆ ಬಾವಿಗಳು ಮತ್ತು ಇತರೆ ರಚನೆಗಳ ಮೂಲಕ ಅಂತರ್ಜಲ ಮರುಪೂರಣ ಮಾಡಲು ಉತ್ತೇಜನ ನೀಡುವುದು.<br>* |

## ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (MGNREGA) ಇಲಾಖಾ ಕಾರ್ಯಕ್ರಮಗಳ ಒಗ್ಗೂಡಿಸುವಿಕೆ.

### ಕೃಷಿ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು:

**ಪರಿಶಿಷ್ಟ ಜಾತಿ / ಪ. ಪಂಗಡ / ಸಣ್ಣ ಮತ್ತು ಅತೀ ಸಣ್ಣ ಪ್ರವರ್ಗಕ್ಕೆ ಸೇರಿದ ಫಲಾನುಭವಿಗಳಿಗೆ ಇಲಾಖಾ ಕಾರ್ಯಕ್ರಮಗಳ ಒಗ್ಗೂಡಿಸುವಿಕೆಯೊಂದಿಗೆ ಎರೆಹುಳು ತೊಟ್ಟಿ, ರಸಸಾರ ಘಟಕ (ಬಯೋ ಡೈಜೆಸ್ಟರ್) ಮತ್ತು ರೈತರ ಜಮೀನಿನಲ್ಲಿ ನೀರಾವರಿ ಸೌಲಭ್ಯಕ್ಕಾಗಿ ಕೃಷಿ ಹೊಂಡ, ಅಲ್ಪ ಆಳದ ಬಾವಿ ನಿರ್ಮಾಣ. ಸಮುದಾಯ ಕಾಮಗಾರಿಗಳಲ್ಲಿ ಮಲ್ಟಿ ಆರ್ಚ್ ಚೆಕ್ ಡ್ಯಾಂಗಳ ನಿರ್ಮಾಣ ಮತ್ತು ಸಾರ್ವಜನಿಕ ರೈತರ ಕಣ ನಿರ್ಮಾಣ.**

# ಕೃಷಿ ಯಾಂತ್ರೀಕರಣ ಯೋಜನೆಗಳು

**ಕೃಷಿ ಇಲಾಖೆಯಿಂದ ಸಹಾಯಧನದಲ್ಲಿ ವಿತರಿಸಲಾಗುವ ಯಂತ್ರೋಪಕರಣಗಳು :**

❖ **ಭೂ ಸಿದ್ಧತೆ ಯಂತ್ರಗಳು :**

* ಪವರ್ ಟಿಲ್ಲರ್ * ಮಿನಿ ಟ್ರಾಕ್ಟರ್ * ಟ್ರಾಕ್ಟರ್ ರೋಟಾವೇಟರ್
* ಡಿಸ್ಕ್ ಹ್ಯಾರೋ * ಕಲ್ಟಿವೇಟರ್ * ಲೆವೆಲರ್

❖ **ಕೃಷಿ ಉತ್ಪನ್ನಗಳ ಸಂಸ್ಕರಣೆ ಯಂತ್ರಗಳು :**

* ಭತ್ತದ ಒಕ್ಕಣೆಯಂತ್ರ * ಕಬ್ಬು ಅರೆಯುವ ಯಂತ್ರ
* ಹಿಟ್ಟಿನ ಗಿರಣಿ * ರಾಗಿ ಕ್ಲೀನಿಂಗ್ ಮಿಷಿನ್

❖ **ಇತರೆ ಹೈಟೆಕ್ ಕೃಷಿ ಯಂತ್ರೋಪಕರಣಗಳು :**

- ಡೀಸೆಲ್ ಪಂಪ್‌ಸೆಟ್
- ಮೇವು ಕತ್ತರಿಸುವ ಯಂತ್ರ

ನೀಡಬೇಕಾದ ದಾಖಲೆಗಳು :

- ಅರ್ಜಿ
- ಗುರುತಿನ ಚೀಟಿ
- ಫೋಟೋ
- ಪಹಣಿ
- ಬ್ಯಾಂಕ್ ಪುಸ್ತಕದ ಪ್ರತಿ
- ಆಧಾರ ಕಾರ್ಡ್
- ಟ್ರಾಕ್ಟರ್ / ಪವರ್ ಟಿಲ್ಲರ್ ಉಪಕರಣಗಳಿಗೆ ಆರ್. ಸಿ. ಪುಸ್ತಕದ ಜೆರಾಕ್ಸ್
- ಪ.ಜಾ./ಪ.ಪಂ. ರೈತರಾಗಿದ್ದಲ್ಲಿ ಜಾತಿ ಪ್ರಮಾಣ ಪತ್ರ ಪ್ರತಿ
- ಸಂಬಂಧಿಸಿದ ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಅರ್ಜಿ ಸಲ್ಲಿಸುವುದು.
- ಅನುದಾನದ ಲಭ್ಯತೆ ಹಾಗೂ ಜೇಷ್ಠತೆಯ ಆಧಾರದ ಮೇಲೆ ಉಪಕರಣಗಳನ್ನು ವಿತರಿಸಲಾಗುವುದು.

ಸಹಾಯಧನ :

ಸಾಮಾನ್ಯ ರೈತರಿಗೆ ಶೇ. 50ರ ಸಹಾಯಧನ

ಪರಿಶಿಷ್ಟ ಜಾತಿ/ಪಂಗಡದ ರೈತರಿಗೆ ಶೇ 90ರ ಸಹಾಯಧನ

# ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ

**ಕೃಷಿ ಇಲಾಖೆಯಿಂದ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮಗಳು :**

* ಸಹಾಯಧನದಲ್ಲಿ ಹೈಟೆಕ್ ಕೃಷಿ ಯಂತ್ರೋಪಕರಣಗಳ ವಿತರಣೆ
* ಸಹಾಯಧನದಲ್ಲಿ ಲಘು ಪೋಷಕಾಂಶಗಳ ವಿತರಣೆ
* ಕೃಷಿ ಉತ್ಪನ್ನ ಸಂಸ್ಕರಣೆ ಘಟಕಗಳ ವಿತರಣೆ

# 2017–18ನೇ ಸಾಲಿನಲ್ಲಿ ಕೃಷಿ ಇಲಾಖೆಯಿಂದ ಅನುಷ್ಠಾನಗೊಳಿಸಲಾಗುವ ಯೋಜನೆಗಳ ಸಂಕ್ಷಿಪ್ತ ವಿವರ

| ಕ್ರ.ಸ. | ಯೋಜನೆ | ಘಟಕಗಳ ವಿವರ |
|---|---|---|
| | **ರಾಜ್ಯ ವಲಯ ಯೋಜನೆಗಳು** | |
| | **ಬೀಜಗಳ ಪೂರೈಕೆ ಹಾಗೂ ಇತರ ಹೂಡುವಳಿ ಯೋಜನೆ :** | |
| 1 | ಅ) ಸಹಾಯಧನದಲ್ಲಿ ಬಿತ್ತನೆ ಬೀಜಗಳ ವಿತರಣೆ, | ಸಾಮಾನ್ಯ ರೈತರಿಗೆ ಶೇ. 50 ಮತ್ತು ಪ.ಜಾ/ಪ.ಪಂ. ರೈತರಿಗೆ ಶೇ. 75ರ ಸಹಾಯಧನದಲ್ಲಿ ಭತ್ತ, ಮುಸುಕಿನಜೋಳ, ರಾಗಿ, ದ್ವಿದಳ ಧಾನ್ಯ, ಎಣ್ಣೆಕಾಳು ಬೆಳೆಗಳ ಬಿತ್ತನೆ ಬೀಜ ವಿತರಣೆ |
| | ಆ) ಮಣ್ಣಿನ ಸತ್ವ ಹೆಚ್ಚಿಸುವ ಕಾರ್ಯಕ್ರಮ | ಸಾಮಾನ್ಯ ರೈತರಿಗೆ ಶೇ. 50 ಮತ್ತು ಪ.ಜಾ/ಪ.ಪಂ. ರೈತರಿಗೆ ಶೇ. 75ರ ಸಹಾಯಧನದಲ್ಲಿ ಕೃಷಿಸುಣ್ಣ/ ಜಿಪ್ಸಂ, ಲಘು ಪೋಷಕಾಂಶಗಳಾದ ಜಿಂಕ್ ಸಲ್ಫೇಟ್, ಬೋರಾಕ್ಸ್, ಜೀವಾಣು ಗೊಬ್ಬರ, ಡಯಾಂಚ/ಸೆಣಬು ಹಸಿರೆಲೆ ಗೊಬ್ಬರ ಬೀಜ ವಿತರಣೆ, ಎರೆಹುಳು ತೊಟ್ಟಿ, ರಸಸಾರ ಘಟಕ (ಬಯೋಡೈಜೆಸ್ಟರ್)ಗಳ ನಿರ್ಮಾಣ. |
| 2 | ಭೂ ಚೇತನ ಕಾರ್ಯಕ್ರಮ :<br>ಸಮಗ್ರ ಕೃಷಿ ವಿಸ್ತರಣಾ ಪದ್ಧತಿ : | ರೈತ ಅನುವುಗಾರರಿಗೆ ತರಬೇತಿ, ರೈತ ಕ್ಷೇತ್ರ ಪಾಠಶಾಲೆ, ಕ್ಷೇತ್ರೋತ್ಸವ ಹಾಗೂ ಸಹಾಯ ಧನದಲ್ಲಿ ಲಘು ಪೋಷ ಕಾಂಶಗಳ ವಿತರಣೆ |
| 4 | ಪರಂಪರಾಗತ ಕೃಷಿ ವಿಕಾಸ ಯೋಜನೆ (ಕಪಗಿಜ) (ಬಾಳೆಗುಳಿ, ಕುಂಟಕಣಿ ಮತ್ತು ಹೊನ್ನೆಬೈಲು) | ಬೆಳೆ ನಿರ್ಧಿಷ್ಟ ಸಾವಯವ ಕ್ಲಸ್ಟರ್‌ಗಳಿಗಾಗಿ (Crop Specific Organic Cluster) ಅಭಿವೃದ್ಧಿಪಡಿಸಲು ರೈತರುಗಳಿಗೆ ಸಾವಯವ ಕೃಷಿಗೆ ಪೂರಕವಾದ ಕಾರ್ಯಕ್ರಮ/ಘಟಕಗಳ ಸ್ಥಾಪನೆಗೆ ಆಯ್ದ ಮೂರು ಗ್ರಾಮಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. |
| 5 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (ಅಕ್ಕಿ) | ಭತ್ತದ ಯಾಂತ್ರೀಕೃತ ನಾಟಿ ಪ್ರಾತ್ಯಕ್ಷಿಕೆ, ನೇರ ಬಿತ್ತನೆ ಪ್ರಾತ್ಯಕ್ಷಿಕೆ, ಸಹಾಯ ಧನದಲ್ಲಿ ಭತ್ತದ ಬಿತ್ತನೆ ಬೀಜ, ಹಸಿರೆಲೆ ಗೊಬ್ಬರ ಬೀಜ ವಿತರಣೆ, ಕೃಷಿ ಸುಣ್ಣ, ಲಘು ಪೋಷಕಾಂಶಗಳ ವಿತರಣೆ, ಸಸ್ಯ ಸಂರಕ್ಷಣಾ ಔಷಧಿ ಹಾಗೂ ಕೃಷಿ ಉಪಕರಣಗಳ ವಿತರಣೆ |
| 6 | ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ (ದ್ವಿದಳ ಧಾನ್ಯ) | ಸಹಾಯ ಧನದಲ್ಲಿ ದ್ವಿದಳ ಧಾನ್ಯಗಳ ಬಿತ್ತನೆ ಬೀಜ, ಸಸ್ಯ ಸಂಕ್ಷಣಾ ಔಷಧಿಗಳ ವಿತರಣೆ |

| | | |
|---|---|---|
| 7 | ಕೃಷಿ ಅಭಿಯಾನ – "ಇಲಾಖೆಗಳ ನಡಿಗೆ ರೈತರ ಮನೆ ಬಾಗಿಲಿಗೆ" | ಗ್ರಾಮ ಪಂಚಾಯಿತಿ ಮತ್ತು ಹೋಬಳಿ ಮಟ್ಟದಲ್ಲಿ ಕೃಷಿ ಹಾಗೂ ಕೃಷಿ ಸಂಬಂಧಿತ ಇಲಾಖೆಗಳ ಸಮನ್ವಯದೊಂದಿಗೆ ಸಮಗ್ರ ಕೃಷಿ ಮಾಹಿತಿಯನ್ನು ರೈತರಿಗೆ ತಲುಪಿಸುವುದು. ಉತ್ಪಾದಕತೆ ಹೆಚ್ಚಿಸುವ ತಾಂತ್ರಿಕತೆಗಳ ಮನವರಿಕೆ. ವಿಜ್ಞಾನಿಗಳೊಂದಿಗೆ ರೈತರ ಸಂವಾದ. |
| 8 | ನೇರ ಪ್ರೋತ್ಸಾಹ ಧನ ವರ್ಗಾವಣೆ (ಡಿ.ಬಿ.ಟಿ.) | ಕೇಂದ್ರ ಪುರಸ್ಕೃತ ರಾಷ್ಟ್ರೀಯ ಆಹಾರ ಭದ್ರತಾ ಯೋಜನೆ, ಆತ್ಮ ಯೋಜನೆ, ಎಣ್ಣೆಕಾಳು ಅಭಿವೃದ್ಧಿ ಯೋಜನೆ ಅಡಿ ಪ್ರಾತ್ಯಕ್ಷಿಕೆಗಳ ಮೊತ್ತವನ್ನು ನೇರವಾಗಿ ಫಲಾನುಭವಿ ಖಾತೆಗೆ ಜಮಾ ಮಾಡಲಾಗುವುದು. |
| **ಜಿಲ್ಲಾ ವಲಯ ಯೋಜನೆಗಳು** | | |
| 1 | ಸಾವಯವ ಗೊಬ್ಬರ ಯೋಜನೆ | ಸಹಾಯ ಧನದಲ್ಲಿ ಎರೆಹುಳು ಗೊಬ್ಬರ / ಸಿಟಿ ಕಾಂಪೋಸ್ಟ್ ವಿತರಣೆ |
| 2 | ರೈತ ಸಂಪರ್ಕಕೇಂದ್ರ ನಿರ್ವಹಣೆ ಯೋಜನೆ | ರೈತ ಸಂಪರ್ಕಕೇಂದ್ರಗಳ ನಿರ್ವಹಣೆ ಮತ್ತು ಪ್ರಾತ್ಯಕ್ಷಿಕೆ |
| 3 | ಇತರೆ ಯೋಜನೆಗಳು | ಸಹಾಯ ಧನದಲ್ಲಿ ಕೃಷಿ ಯಂತ್ರೋಪಕರಣಗಳ ವಿತರಣೆ |
| **ತಾಲ್ಲೂಕು ಪಂಚಾಯಿತಿ ಯೋಜನೆಗಳು** | | |
| 1 | ರೈತರಿಗೆ ಸಹಾಯ–ಸಸ್ಯ ಸಂರಕ್ಷಣಾ ಯೋಜನೆ | ಸಹಾಯ ಧನದಲ್ಲಿ ಸಸ್ಯ ಸಂರಕ್ಷಣಾ ಔಷಧಿ / ಉಪಕರಣ ವಿತರಣೆ |
| 2 | ವಿಶೇಷ ಘಟಕ ಯೋಜನೆ | ಶೇ. 90ರ ಸಹಾಯಧನದಲ್ಲಿ ಪರಿಕರ, ಟಾರ್ಪಾಲ್ ಅಥವಾ ಕೃಷಿ ಯಂತ್ರೋ ಪಕರಣಗಳ ವಿತರಣೆ |

## ರೈತರ ಆಕಸ್ಮಿಕ ಮರಣ / ಆತ್ಮಹತ್ಯೆ /ಬಣವೆ ಸುಟ್ಟ ಪ್ರಕರಣಗಳಿಗೆ ಪರಿಹಾರ

- ಕೃಷಿ ಚಟುವಟಿಕೆಗಳಲ್ಲಿ ನಿರತರಾಗಿದ್ದಾಗ ರೈತರು ಹಾಗೂ ಕೃಷಿ ಕಾರ್ಮಿಕರು ಹಾವು ಕಡಿತದಿಂದ ಅಥವಾ ಮರದಿಂದ ಬಿದ್ದು ಮರಣ ಹೊಂದಿದಾಗ ರೂ. 1,00,000/– ರವರೆಗೆ ಪರಿಹಾರ ಧನ.
- ಸಾಲ ಬಾಧೆಯಿಂದ ಆತ್ಮಹತ್ಯೆ ಮಾಡಿಕೊಂಡ ರೈತರ ಕುಟುಂಬದವರಿಗೆ ರೂ. 5,00,000/– ಪರಿಹಾರ ಧನ.
- ಕಾಳು ರಹಿತ ಬಣವೆ ಸುಟ್ಟ ಪ್ರಕರಣಗಳಲ್ಲಿ ಗರಿಷ್ಠ 3 ಎಕರೆಗೆ ರೂ. 2000/–ಗಳ ಪರಿಹಾರ ಧನ.
- ಕಾಳು ಸಹಿತ ಬಣವೆ ಸುಟ್ಟ ಪ್ರಕರಣಗಳಲ್ಲಿ ಗರಿಷ್ಠ 3 ಎಕರೆಗೆ ರೂ. 10000/–ಗಳ ಪರಿಹಾರ ಧನ ವಿತರಣೆ.

**<u>ಸಲ್ಲಿಸಬೇಕಾದ ದಾಖಲೆಗಳು :</u>**

- ವಾರಸುದಾರರಿಂದ ಅರ್ಜಿ
- ಗುರುತಿನ ಚೀಟಿ ಜೆರಾಕ್ಸ್
- ಪೊಲೀಸ್ ಇಲಾಖೆಯ ಎಫ್.ಐ.ಆರ್., ಮಹಜರು ವರದಿ ಮತ್ತು ಅಂತಿಮ ವರದಿ
- ರೈತರ ಮರಣ ಪ್ರಕರಣಗಳಲ್ಲಿ ವೈದ್ಯರಿಂದ ಮರಣೋತ್ತರ ಪರೀಕ್ಷಾ ವರದಿ
- ಬಣವೆ ಸುಟ್ಟ ಪ್ರಕರಣಗಳಲ್ಲಿ ಅಗ್ನಿಶಾಮಕ ದಳದ ವರದಿ
- ಆಕಸ್ಮಿಕ ಮರಣ ಪ್ರಕರಣದಲ್ಲಿ ಕೃಷಿ ಕಾರ್ಮಿಕರಾಗಿದ್ದಲ್ಲಿ ದೃಢೀಕರಣ
- ಪಹಣಿ.
- ರೈತರ ಮರಣ ಪ್ರಕರಣಗಳಲ್ಲಿ ವಂಶ ವೃಕ್ಷ
- ಆತ್ಮ ಹತ್ಯೆ ಪ್ರಕರಣಗಳಲ್ಲಿ ಸಾಲದ ಬಗ್ಗೆ ದೃಢೀಕರಣ
- ಆಕಸ್ಮಿಕ ಮರಣ ಮತ್ತು ಬಣವೆ ಸುಟ್ಟ ಪ್ರಕರಣಗಳಲ್ಲಿ ಸ್ಥಳದ ಫೋಟೋ.

**ಇಂತಹ ಸಂದರ್ಭಗಳಲ್ಲಿ ಮೇಲ್ಕಂಡ ದಾಖಲೆಗಳೊಂದಿಗೆ ಕೂಡಲೇ ತಮ್ಮ ವ್ಯಾಪ್ತಿಯ ರೈತ ಸಂಪರ್ಕ ಕೇಂದ್ರವನ್ನು ಸಂಪರ್ಕಿಸುವುದು.**

# ಕೃಷಿ ಪ್ರಶಸ್ತಿ – ರೈತರಿಗೆ ಉತ್ಪಾದನಾ ಬಹುಮಾನ

ರೈತರಲ್ಲಿ ಆರೋಗ್ಯಕರ ಸ್ಪರ್ಧಾಮನೋಭಾವವನ್ನು ಉಂಟು ಮಾಡಿ, ಆಯ್ದ ಬೆಳೆಗಳಲ್ಲಿ ಅತೀ ಹೆಚ್ಚು ಇಳುವರಿ ಪಡೆಯುವ ರೈತರುಗಳಿಗೆ ರಾಜ್ಯ, ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಪ್ರಥಮ, ದ್ವಿತೀಯ ಹಾಗೂ ತೃತೀಯ ಬಹುಮಾನ ನೀಡುವುದು.

# ಕೃಷಿ ಪಂಡಿತ ಪ್ರಶಸ್ತಿ

ಕೃಷಿ ಕ್ಷೇತ್ರದಲ್ಲಿ ವಿನೂತನ/ಹೊಸ ಅನ್ವೇಷಣೆ ಮತ್ತು ಸೃಜನಾತ್ಮಕ ಕಾರ್ಯಗಳಿಂದ ಗಮನಾರ್ಹ ಸಾಧನೆ ಮಾಡಿರುವ ಮತ್ತು ರೈತ ಸಮುದಾಯದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡುತ್ತಿರುವ ಪ್ರಗತಿಪರ ರೈತರನ್ನು ಗುರುತಿಸಿ ಕೃಷಿ ಪಂಡಿತ ಪ್ರಶಸ್ತಿಯನ್ನು ನಗದು ಬಹುಮಾನದೊಂದಿಗೆ ನೀಡಿ ಗೌರವಿಸುವ ಕಾರ್ಯಕ್ರಮ.

**ದಾಖಲೆ ಮತ್ತು ಅರ್ಜಿ ಸಲ್ಲಿಸುವ ವಿಧಾನ :**

- ಕೃಷಿ ಪ್ರಶಸ್ತಿ/ಕೃಷಿ ಪಂಡಿತ ಪ್ರಶಸ್ತಿಗೆ ಅರ್ಜಿಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಣೆ ನೀಡುವುದರ ಮೂಲಕ ತಿಳಿಸಲಾಗುವುದು.
- ಸಂಬಂಧಪಟ್ಟ ರೈತ ಸಂಪರ್ಕ ಕೇಂದ್ರಗಳ ಮುಖಾಂತರ ಅರ್ಜಿಯನ್ನು ಸಲ್ಲಿಸುವುದು.

**ದಾಖಲೆಗಳು:**

- ಫೋಟೋ
- ಗುರುತಿನ ಚೀಟಿ
- ಪಹಣಿ
- ಜಾತಿ ಪ್ರಮಾಣ ಪತ್ರ (ಪ.ಜಾ/ಪ.ಪಂ. ರೈತರಿಗೆ)
- ನಿಗದಿತ ಶುಲ್ಕ
- ಕೃಷಿ ಪಂಡಿತ ಪ್ರಶಸ್ತಿಗೆ ರೈತರು ಕೈಗೊಂಡ ವಿಶೇಷ ಸಾಧನೆಗಳ ಫೋಟೋ ಸಮೇತ ದಾಖಲೆ.